**OS NO.50/2022**
**PW-1**

**<u>ಸಾಕ್ಷಿಯನ್ನು ಇಂದು ದಿನಾಂಕ 30.07.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**ಪಾಟಿ ಸವಾಲು ಶ್ರೀ ಎನ್ ಆರ್ ಪ್ರತಿವಾದಿ ಪರ ವಕೀಲರಿಂದಃ-**

ಸರ್ವೆಗೆ ಅರ್ಜಿ ಕೊಡುವ ಮುನ್ನ ಯಾರಿಗಾದರೂ ನೋಟೀಸು ಕೊಟ್ಟಿದ್ದೀರ ಎಂದರೆ ಸರ್ಕಾರದ ಪರವಾಗಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ಮಾಡುವಾಗ ಪ್ರತಿವಾದಿಯವರು ಹಾಜರು ಇರಲಿಲ್ಲ. ಸಾಕ್ಷಿ ಮುಂದುವರೆದು ಅವರಿಗೆ ನೋಟೀಸು ನೀಡಲಾಗಿತ್ತು ಎಂದು ನುಡಿಯುತ್ತಾರೆ. ನಾವು ಸರ್ವೆ ಮಾಡಿಸಿದ ನಂತರ ಭೂಮಿ ಒತ್ತುವರಿಯಾಗಿದೆ ಎಂದು ತಿಳಿದ ನಂತರ ಪ್ರತಿವಾದಿಯವರು ಕೂಡ ಸರ್ವೆಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಅವರು ಸರ್ವೆ ಮಾಡಿಸಿದಾಗ ಒತ್ತುವರಿಯಾಗಿರುವ ಬಗ್ಗೆ ಕಾಣಿಸಿಲ್ಲ ಎಂದರೆ ಸರಿ. ಪ್ರತಿವಾದಿಯವರು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಜಮೀನುಗಳು ಬೇರೆ ಬೇರೆ ಇವೆ. ಪ್ರತಿವಾದಿಯವರು ಪ್ರತ್ಯೇಕವಾಗಿ ಯಾರು ಎಷ್ಟು ಅಳತೆಯಷ್ಟು ಒತ್ತುವರಿ ಮಾಡಿದ್ದಾರೆ ಎಂದು ದಾವಾ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಪ್ರತಿವಾದಿಯವರು 10 ಗುಂಟೆಯಷ್ಟು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅವರಿಗೆ 10 ಗುಂಟೆ ಬಿಟ್ಟುಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಒತ್ತುವರಿಯಾಗಿಲ್ಲ ಎಂದರೂ ಕೂಡ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸರ್ವೆ ಮಾಡುವ ಕಾಲಕ್ಕೆ ಅವರಿಗೆ ನೋಟೀಸು ನೀಡಿದ್ದು , ಅವರಿಗೆ ಅದು ತಲುಪಿದೆ ಎಂದು ತೋರಿಸಲು ಯಾವುದೇ ದಾಕಲಾತಿ ಹಾಜರು ಮಾಡಿಲ್ಲ ಎಂದರೆ ಸರಿ.

(ವಾದಿ ಪರ ವಕೀಲರು ಮುಂದುವರೆದ ಸಾಕ್ಷಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಸೇಡಂ.

Plaintiff is present.

Counsel for defendant fully cross examined PW−1. Counsel for plaintiff prays time for further evidence. Time granted.

Call on 12.08.2024.

Civil Judge, Sedam.